ಕರ್ನಾಟಕ ವಿಧಾನಸಭೆ

ಹತ್ತನೆಯ ವಿಧಾನಸಭೆ

(ಮೂರನೆಯ ಅಧಿವೇಶನ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ, 1995

(1995ರ ವಿಧಾನಸಭಾ ವಿಧೇಯಕ ಸಂಖ್ಯೆ 22)

ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಹೊರತು ನಾಗರೀಕರ ಹಿಂದುಳಿದ ವರ್ಗಗಳಿಗಾಗಿ ಆಯೋಗವನ್ನು ರಚಿಸಲು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅನುಷಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಹೊರತು ನಾಗರೀಕರ ಹಿಂದುಳಿದ ವರ್ಗಗಳಿಗಾಗಿ ಆಯೋಗವನ್ನು ರಚಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಅನುಷಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾದುದರಿಂದ,

ಇದು ಭಾರತ ಗಣರಾಜ್ಯದ ನಲವತ್ತಾರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು

ಅಧ್ಯಾಯ–I

ಪ್ರಾರಂಭಿಕ

1. ಚಿಕ್ಕಹೆಸರು ಮತ್ತು ಪ್ರಾರಂಭ : (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995 ಎಂದು ಕರೆಯತಕ್ಕದ್ದು.

(2)ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು : ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) 'ಹಿಂದುಳಿದ ವರ್ಗಗಳು' ಎಂದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳನ್ನುಳಿದು ಕಾಲಕಾಲಕ್ಕೆ ಪಟ್ಟಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ನಾಗರೀಕರ ವರ್ಗ ಅಥವಾ ವರ್ಗಗಳು ;

(ಬಿ) 'ಆಯೋಗ' ಎಂದರೆ 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ;

(ಸಿ) 'ಪಟ್ಟಿಗಳು' ಎಂದರೆ ಸಂವಿಧಾನದ 15(4) ಮತ್ತು 16(4)ನೇ ಅನುಚ್ಛೇದಗಳ ಅಡಿಯಲ್ಲಿ ನಾಗರೀಕರ ಹಿಂದುಳಿದ ವರ್ಗಗಳ ಪರವಾಗಿ ಮೀಸಲಾತಿಗೆ ಉಪಬಂಧ ಕಲ್ಪಿಸುವ ಉದ್ದೇಶದಿಂದ ಕಾಲಕಾಲಕ್ಕೆ ರಾಜ್ಯ ಸರ್ಕಾರವು ಸಿದ್ಧಪಡಿಸಿದ ಪಟ್ಟಿಗಳು ;

(ಡಿ) 'ಸದಸ್ಯ' ಎಂದರೆ ಆಯೋಗದ ಸದಸ್ಯ.